ಇ) ಬಾಕಿ ಉಳಿದಿರುವ ಯೋಜನೆಗಳಿಗೆ ಮಂಜೂರಾತಿಯನ್ನು ಪಡೆದುಕೊಳ್ಳಲು ರಾಜ್ಯ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1994-95ನೇ ಸಾಲಿನಲ್ಲಿ ಕೇಂದ್ರ ಒಪ್ಪಿಗೆಗಾಗಿ ಕಳುಹಿಸಲಾದ ಪ್ರವಾಸೋದ್ಯಮ ಯೋಜನೆಗಳು

1) ಧಾರವಾಡದಲ್ಲಿ ಯಾತ್ರಿ ನಿವಾಸ

2) ಗುಲ್ಬರ್ಗಾದಲ್ಲಿ ಯಾತ್ರಿ ನಿವಾಸ

3) ಬಸವಕಲ್ಯಾಣದಲ್ಲಿ ಪ್ರವಾಸಿ ಸಂಕೀರ್ಣ

4) ಕುದುರೆ ಮುಖದಲ್ಲಿ ಪ್ರವಾಸಿ ಸಂಕೀರ್ಣ

5) ಐಹೊಳೆಯಲ್ಲಿ ಪ್ರವಾಸಿ ಸಂಕೀರ್ಣ

6) ಕಾರವಾರದಲ್ಲಿ ಪ್ರವಾಸಿ ಸಂಕೀರ್ಣ

7) ಪಟ್ಟದ ಕಲ್ಲಿನಲ್ಲಿ ಪ್ರವಾಸಿ ಸಂಕೀರ್ಣ

ಆ) 1994-95ನೇ ಸಾಲಿನಲ್ಲಿ ಕಳುಹಿಸಲಾಗಿತ್ತು. ಮೇಲ್ಕಂಡ ಎಲ್ಲಾ ಯೋಜನೆಗಳಿಗೆ ಮಂಜೂರಾತಿ ನೀಡಿದೆ.

ಇ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಮಂಡಿಸಲಾಯಿತು

ಅಧ್ಯಕ್ಷರು ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ದೂರದರ್ಶನದಲ್ಲಿ ಸದನದ ಕಾರ್ಯಕಲಾಪಗಳ ಪ್ರಸಾರ

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಒಂದಹೊಸ ವಾತಾವರಣವನ್ನು ನೋಡುತ್ತಿದ್ದೇನೆ. ಇಲ್ಲಿಯವರೆಗೆ ಸದನ ಪ್ರಾರಂಭವಾಗುವಂಥ ಸಂದರ್ಭದಲ್ಲಿ ನಮ್ಮ ದೂರದರ್ಶನದವರು ಇಲ್ಲಿ ರೆಕಾರ್ಡ್ ಮಾಡಿಕೊಳ್ಳುತ್ತಿದ್ದರು. ರೆಕಾರ್ಡ್ ಮಾಡುವ ಸಂಧರ್ಭದಲ್ಲಿ ನಾನು ತಿಳಿದುಕೊಂಡೆ, ದೂರದರ್ಶನದವರು ಇರಬಹುದು ಎಂದು ಹೇಳಿ. ಆದರೆ ಪೂರ್ಣ ಕಾರ್ಯಕ್ರಮವನ್ನು ದೂರದರ್ಶನದಲ್ಲಿ ಇವತ್ತು ರೆಕಾರ್ಡ್ ಮಾಡುತ್ತಿರುವಂಥ ಈ ಒಂದು ಪದ್ಧತಿ ನಮ್ಮ ಸದಸ್ಯರಿಗೆ ಗೊತ್ತಿರಲಿಲ್ಲ. ಇದು ಇವತ್ತಿನಿಂದ ಪ್ರಾರಂಭವಾಗದೆ. ಇದು ಪ್ರತಿದಿವಸ ಇರುತ್ತದೋ, ಅಥವಾ ಇವತ್ತಿಗೆ ಮಾತ್ರ ಸೀಮಿತವೋ ಎನ್ನುವುದನ್ನು ದಯವಿಟ್ಟು ಸದನದ ಗಮನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಮ್ಮ ಪ್ರಶ್ನೋತ್ತರ ಅವಧಿಯನ್ನು ನೇರ ಪ್ರಸಾರಕ್ಕೆ ಲೋಕಸಭೆ ತರಹ ವ್ಯವಸ್ಥೆ ಮಾಡಬೇಕೆಂದು ನಾನು, ಮೇಲ್ಮನೆಯ ಸಭಾಪತಿಗಳು ಕೇಂದ್ರ ಸಚಿವರು ಕೇಳಿಕೋಂಡೆವು. ಅವರು ಇನ್ನೂ ಆ ವಿಚಾರದ ಕಡೆಗೆ ಗಮನವನ್ನು ಕೊಡಲಿಲ್ಲ. ಖಾಸಗಿಯವರೊಬ್ಬರು ಬಂದು ನಾವು ಮಾಡುತ್ತೇವೆ ಎಂದು ಹೇಳಿದರ. ನಮ್ಮದು ಎಲ್ಲಾ ತೆಗೆದು ಹೊರಗೆ ಬಹಿರಂಗವಾಗಿ ಇಟ್ಟಿರುವುದರಿಂದ ನಾವು ಮುಚ್ಚಿಡುವಂಥತದ್ದು ಏನೂ ಇಲ್ಲ ಯಾವುದೇ ಮದ್ಯಮದ ಮುಖಾಂತರ ನಮ್ಮ ಕಾರ್ಯಕಲಾಪಗಳು ಜನರಿಗೆ ಪರಿಚಯವಾಗುವುದಾದರೆ ಆಗಲಿ ಎನ್ನುವ ದೃಷ್ಟಿಯಿಂದ ಅನುಮತಿ ಕೊಟ್ಟಿದ್ದೇನೆ. ಅವರು ಇವತ್ತು ಒಂದು ದಿವಸ ಮಾಡುತ್ತೇವೆ ಎಂದು ಹೇಳಿದ್ದಾರೆ. ದಿವಸ ಮಾಡುವುದಾದರೆ ನಮಗೇನೂ ಅಭ್ಯಂತರವಿಲ್ಲ. ಇನ್ನು ಯಾರಾದರೂ

ಮುಂದು ಬಂದು ಮಾಡುತ್ತಾರೆ ಎಂದರೆ ನಮ್ಮ ಕಾರ್ಯ ಕಲಾಪಗಳ ಪರಿಚಯ ಜನರಿಗೆ ಆಗಬೇಕು ಎನ್ನುವ ದೃಷ್ಟಿಯಿಂದ ಮಾತ್ರ ಅವಕಾಶ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನೈಗರಾಜ್ ; ಈ ಕಾರ್ಯಕ್ರಮ ಯಾವತ್ತೋ ಒಂದು ದಿವಸ ಬಂದು ಯಾರೋ ತಗೆದುಹೋಗುವಂಥದ್ದಲ್ಲ, ತಾವು ಇದನ್ನು ಸಮಗ್ರವಾಗಿ ಪ್ರತದಿನ ಶಾಸನಸಭೆಯನ್ನು ಲೋಕಸಭೆ ರೀತಿ ಮಾಡುವುದಿದ್ದರೆ ಅದರ ಬಗ್ಗೆ ನಮ್ಮ ಸರ್ಕಾರದ ಯೋಜನೆಗಳೇನಾದರೂ ಇದೆಯೇ? ಆ ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆ? ಕೇಂದ್ರಸರ್ಕಾರದ ಜೊತೆಯಲ್ಲಿ ತಾವು ಮಾತುಕತೆ ಆಡಿರುವುದು ಏನು? ಅದಕ್ಕೆ ಅವರ ಉತ್ತರವೇನು? ಮೊದಲಿನಿಂದಲು ಲೋಕಸಭೆಯ ರೀತಿ ದೂರದರ್ಶನದ ನೇರ ಪ್ರಸಾರ ಮಾಡಬೇಕು ಎನ್ನುವ ಉದ್ದೇಶ ಇದೆ ಅದರ ಬಗ್ಗೆ ಎಲ್ಲಿಯವರಗೆ ತಲುಪಿದೆ? ಕೇಂದ್ರ ಸರ್ಕಾರದವರು ನಿಮಗೆ ಏನು ಭರವಸೆಗಳನ್ನು ಕೊಟ್ಟಿದ್ದಾರೆ ಎನ್ನುವುದು ಬಹಳ ಅತೀ ಮುಖ್ಯ.

ಅಧ್ಯಕ್ಷರು : ನಮ್ಮ ಅಹವಾಲಿಗೆ ಅವರು ಇನ್ನೂ ಪ್ರತಿಕ್ರಯೆ ತೋರಿಸಿಲ್ಲ, ದೂರದರ್ಶನದವರು ಇಲ್ಲಿ ಬಂದು ಚಿತ್ರೀಕಣ ಮಾಡಿದಾಗನಾವು ಸ್ವಲ್ಪ ಹಣ ತುಂಬ ಬೇಕಾಗುತ್ತದೆ. ಇವರಿಗೆ ನಾವೇನೂ ಹಣ ಕೊಡುತ್ತಿಲ್ಲ, ಆದ್ದರಿಂದ ನಮಗೇನು ಖರ್ಚು ಬರುವುದಿಲ್ಲ, ನಮ್ಮ ಕಾರ್ಯಕಲಾಪ ಜನರಿಗೆ ಪರಿಚಯವಾಗುವುದರಿಂದ ಖರ್ಚು ಆಗದೇ ಇರುವ ವಿಚಾರದಲ್ಲಿ ನನಗೆ ಆಸಕ್ತಿ ಹೆಚ್ಚು. ಅದಕ್ಕೆ ಇವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಖಾಸಗೀಯವರು ವ್ಯಾಪಾರಿ ಸಂಸ್ಥೆಯವರು. ತಮಿಳುನಾಡಿನಲ್ಲಿ ಸನ್ ಎಂದು ಇದೆ. ಇಲ್ಲಿ ಉದಯ ಎಂದು ಮಾಡಿಕೊಂಡಿದ್ದಾರೆ. ಎರಡೂ ಒಂದೇ. ಅದರಲ್ಲಿ ಬೇರೆ ಪ್ರಶ್ನೆಯೇನೂ ಇಲ್ಲ.

ಅಧ್ಯಕ್ಷರ : ನಮಗೆ ಖರ್ಚೇನೂ ಇಲ್ಲ, ನಮ್ಮ ಕಲಾಪಗಳನ್ನು ತಮಿಳಿನಲ್ಲಿ ಏನೂ ತೋರಿಸುವುದಿಲ್ಲ, ಕನ್ನಡದಲ್ಲೇ ತೋರಿಸುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : ಅದು ನಮ್ಮ ಸಂಸ್ಕೃತಿಗೆ ಅಪಾಯವನ್ನೂ ತರುತ್ತಿದೆ. ಅದರ ಬಗ್ಗೆ ಹೊಸದೇನೂ ಇಲ್ಲ, ನಾನು ಹೇಳುದು ಏನೆಂದರೆ, ನೇರವಾಗಿ ಲೋಕಸಭೆಯಲ್ಲಿ ಸರ್ಕಾರದ ಅಧೀನದಲ್ಲಿರತಕ್ಕಂಥ ಸಂಸ್ಥೆ ಮಾಡುವ ಹಾಗೆ ನಮ್ಮ ಸರ್ಕಾರದ ಸಂಸ್ಥೆಯವರೇ ಮಾಡುವಂಥ ವ್ಯವಸ್ಥೆ ತಾವು ಮಾಡಿ. ತಾವು ಮಾತುಕತೆಯಾಡಿದರೆ ಬಹಳ ಫಲಪ್ರದವಾಗುತ್ತದೆ ಎನ್ನುವುದು ನನ್ನ ಮಾತು.

ಅಧ್ಯಕ್ಷರು : ನಾವು ಈಗಾಗಲೇ ಬೇಡಿಕೆಯನ್ನು ಸಲ್ಲಿಸಿದ್ದೇವೆ. ಅವರು ನಮಗೆ ಇನ್ನು ಏನೂ ತಿಳಿಸಿಲ್ಲ,

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷ. ತಾವು ಇಲ್ಲಿ ವಿಶೇಷವಾದ ಒಂದು ಪ್ರಯತ್ನದಿಂದ ತುಂಬ ಒಳ್ಳೆಯ ರೀತಿ ಕಾರ್ಯಕಲಾಪವಾಗಬೇಕು, ಇದು ನಡೆಯುವಂಥದ್ದನ್ನು ಕೊನೆಯಪಕ್ಷ ಪ್ರಶ್ನೋತ್ತರ ಕಾಲದಲ್ಲಿ ರಾಜ್ಯದ ಜನರಿಗೆ ಗೊತ್ತಾಗಬೇಕು ಎಂದು ಹೇಳಿ ಕೇಂದ್ರ ಸರ್ಕಾರದ ದೂರದರ್ಶನದವರನ್ನು ಸಂಪರ್ಕ ಮಾಡುತ್ತಿರುವುದು ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರಿ. ಅದಷ್ಟು ಬೇಗ ಸಭಾನಾಯಕರ ಸಹಕಾರವನ್ನು ತೆಗೆದುಕೊಂಡು ಎಲ್ಲಾ ರೀತಿಯಲ್ಲೂ ವಿಶೇಷ ಪ್ರಯತ್ನಮಾಡಿ ನಿಮ್ಮ ಕಾಲದಲ್ಲಿ ಇಡೀ ದೇಶದಲ್ಲೇ ವಿಧಾಸಭೆಗಳಲ್ಲಿ ಮೊದಲಬಾರಿಗೆ ಈ ಪ್ರಶ್ನೋತ್ತರವನ್ನು ಬ್ರಾಡ್‌ಕ್ಯಾಸ್ಟ್ ಮಾಡುವಂಥದ್ದು ಬಂದರೆ ನಾವು ಇಲ್ಲಿ ಶಾಸಕರೂ ಆಸಕ್ತಿಯಿಂದ ಕೆಲಸ ಮಾಡುತ್ತೇವೆ. ನಾಡಿನ ಜನರೂ ಸಹಾ ನಮ್ಮ ಪ್ರತಿನಿಧಿಗಳು ಹೇಗೆ ಕೆಲಸ ಮಾಡುತ್ತೇವೆ. ನಾಡಿನ ಜನರೂ ಸಹಾ ನಮ್ಮ ಪ್ರತಿನಿಧಿಗಳು ಹೇಗೆ ಕೆಲಸ ಮಾಡುತ್ತಾರೆ. ಎಂದು ನೋಡುವುದಕ್ಕೆ ತುಂಬಾ ಒಳ್ಳೆಯ

ಅವಕಾಶ ಮಾಡಿಟ್ಟಂತಾಗುತ್ತದೆ. ನಿಮ್ಮ ಕಾಲದಲ್ಲಿ ಅದು ಆಗಬೇಕು. ಆ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಮುಂದುವರೆಸಬೇಕು. ನಮ್ಮಿಂದಾಗುಂಥ ಎಲ್ಲ ರೀತಿಯ ಸಹಕಾರವನ್ನು ನಾವು ಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ದೂರದರ್ಶನಕ್ಕೋಸ್ಕರ ಆಸಕ್ತಿ ಬೇಡ. ಅದು ಇರಲಿ, ಇಲ್ಲದೆ ಇರಲಿ ಆಸಕ್ತಿಯಿಂದ9 ಕೆಲಸ ಮಾಡುತ್ತೇವೆ.

ಅಧ್ಯಕ್ಷರು : ಅವರು ಇವತ್ತಿಗೆ ಅನುಮತಿಯನ್ನು ಕೇಳಿದ್ದಾರೆ. ಇವತ್ತಿಗೆ ಅನುಮತಿಯನ್ನು ಕೊಟ್ಟಿದ್ದೇನೆ. ಅವರು ನಮಗೆ ಖರ್ಚಿಲ್ಲದೇ ಮಾಡುತ್ತಿರುವುದರಿಂದ ದಿನವೂ ಮಾಡಿ ಎಂದು ನಾನು ಹೇಳಲಿಲ್ಲ, ಮಾಡುತ್ತೇವೆ ಎಂದರೆ ಏನು ಮಾಡಬೇಕು ಎಂದು ತಮ್ಮಲ್ಲರನ್ನೂ ಕೇಳಿ ಹೇಳುತ್ತೇನೆ.

ಶ್ರೀ ಬಿ.ಬಿ ಶಿವಪ್ಪ : ಮಾನ್ಯ ಸಭಾಧ್ಯಕ್ಷರು ಇದನ್ನು ಮೋದಲೇ ನಮ್ಮೆಲ್ಲರ ಗಮನಕ್ಕೆ ತಂದಿದ್ದರೆ ಇನ್ನೂ ಬಾರಿ ಪರಿಣಾಮಕಾರಿಯಾಗಿ ಪ್ರಶ್ನೋತ್ತರ ಕಾಲ ಆಗುತ್ತಿತ್ತು ಎಂದು ನನ್ನ ಭಾವನೆ.

ಅಧ್ಯಕ್ಷರು : ನೀವು ನಾಳೆ ಸೂಟ್ ಹಾಕಿಕೊಂಡು ಬರುತ್ತೇನೆ ಎಂದರೆ ನಾನು ಅವರಿಗೆ ರಿಕ್ವೆಸ್ಟ್ ಮಾಡಿಕೊಂಡಾದರೂ ನಾಳೆ ಬರಬೇಕು ಎಂದು ಹೇಳುತ್ತೇನೆ.

ಶ್ರೀ ಹಚ್.ಎನ್. ನಂಜೇಗೌಡ : ನನ್ನದೊಂದು ಸಲಹೆ. ತಾವು ಪರ್ಮಿಷನ ಕೊಡುವುದೇ ಆದರೆ ದಿನದ ಕೊನೆಯ ಭಾಗ Fag end of the day. ಆಗ ಬರುವ ಹಾಗೆ ಮಾಡಿದರೆ ಜಾಸ್ತಿ ಅಟೆಂಡೆನ್ಸ್ಇರುತ್ತದೆ.

ಅಧ್ಯಕ್ಷರು : ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಹೇಳುವುದೇನಂದರೆ, ನಿಯಮ 167(1) ರಲ್ಲಿ ಒಂದು ಸೂಚನೆಯನ್ನು ಕಳುಹಿಸಿದ್ದೀರಿ. ಕೆಲವು ವರದಿಗಳನ್ನು ಮಂಡಿಸಬೇಕಾಗಿದ. ವರದಿಗಳನ್ನು ಮಂಡಿಸಿಬಿಟ್ಟು ಆ ನಂತರ ತೆಗೆದುಕೊಳ್ಳಬಹುದಲ್ಲ!

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಲ್ಲದೆ ಬರಗಾಲದ ಬಗ್ಗೆ ರೂಲ್ 60 ಕೆಳಗೆ ಅಡ್ಜರ್ನಮೆಂಟ್ ಮೋಷನ್ ನಾವು ಕಳುಹಿಸಿದ್ದೆವು.

ಅಧ್ಯಕ್ಷರು : ತಾವು ಕಳುಹಿದ್ದೀರಿ. ತಾವು ಸ್ತ್ರೀಯರು ಇದ್ದೀರಿ. ಅವಿಶ್ವಾಸ ನಿರ್ಣಯದ ಸೂಚನೆಯನ್ನು ಕೊಟ್ಟಾಗ . . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ತಮಗೂ ಗೊತ್ತಿದೆ. ನಾನು ಹೇಳುವುದೇನೆಂದರೆ ಬಿಸಿನೆಸ್ಅಡ್ವೈಸರಿ ಕಮಿಟಿಯಲ್ಲಿ ಅದಕ್ಕೆ ಟೈಮ್ ಕೂಡ ಫಿಕ್ಸ್ ಮಾಡಬಹುದು.There are ttwo ways to decide the things. ಇಲ್ಲದಿದ್ದರೆ ಬಿಸಿನೆಸ್ಅಡ್ವೈಸರಿ ಕಮಿಟಿಯಲ್ಲಿ ತೆಗೆದು ಕೊಂಡು ಎರಡು ದಿವಸ, ಮೂರು ದಿವಸ ಎಷ್ಟು ದಿವಸನೋ ಕಾನ್ಫಿಡೆನ್ಸ್, ಲೋಷನ್ ಮೇಲೆ ಮಾಡುತ್ತತಾರೋ ಎನ್ನುವುದಕ್ಕೆ ಎರಡು ದಿವಸ ಫಿಕ್ಸ್ಮಾಡಬೇಕಾದರೆ ಅಲ್ಲೂ ಮಾಡಬಹುದು. ಇದು ರೂಲ್60 ಕೆಳಗೆ ತಕ್ಷಣ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರ ಇದೆ. ಇದು ಎರಡೂ ಕೂಡ ಪ್ರಮುಖ್ಯ ಇವೆ.

ಅಧ್ಯಕ್ಷರು : ತಾವು ಹೇಳಿದ್ದುದು ಯಾವಾಗ ಬರುತ್ತದೆ ಎಂದರೆ, ಅವರು ಸೂಚನೆ ಮಂಡಿಸಿ ಅಗತ್ಯ ಸಂಖ್ಯೆಯ ಸದಸ್ಯರೆಲ್ಲರೂ ಎದ್ದುನಿಂತು ಸೂಚನೆ ಕ್ರಮಬದ್ಧವಾಗಿದೆ ಎಂದು ನಾವು ಹೇಳಿ ಸಭೆ ಅವರಿಗೆ ಅನುಮತಿಕೊಟ್ಟಮೇಲೆ ನಾನು ಸಚಿವಾಲಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಯವನ್ನು ನಿಗಧಿ ಮಾಡುವಂಥದ್ದು. ಆಗ ತಮ್ಮ ಸೂಚನೆಯ ಪ್ರಶ್ನೆಯು ಬರುತ್ತದೆ. ಈಗ ಇನ್ನೂ ಆ ಹಂತವನ್ನು ನಾವು ತಲುಪಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನನ್ನದೊಂದು ಮನವಿ.

ಮೊದಲೇ ನಾನು ಪ್ರಶ್ನೋತ್ತರಕ್ಕೆ ಮುಂಚಿತವಾಗಿ ಕೇಳಿದೆ. ಅತೀ ಮುಖ್ಯವಾಗಿ ತಾವೇ ಹೇಳಿದಿರಿ, ಪ್ರಶ್ನೋತ್ತರಕ್ಕೆ ಮುಂಚೆ ನನ್ನ ಮನಕ್ಕೆ ನೀವು ತರಲಿಲ್ಲ, ಏಕಾಏಕಿಯಾಗಿ ಎದ್ದಿರಿ ಎಂದು. ಆ ಬಗ್ಗೆ ನಾನು ತಮ್ಮನ್ನು ಕ್ಷಮಾಪಣೆ ಕೇಳಿದ್ದೇನೆ ಅದು ಇರಲಿ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ನೇರವಾಗಿ ತಮ್ಮ ಮೂಲಕ ಕೇಳುತ್ತಿದ್ದೇನೆ. ಮಹಾರಾಷ್ಟ್ರ ಶಾಸನಸಭೆಯಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು, ಈ ಬಗ್ಗೆ ನಾವು ತೀವ್ರವಾದ ನಿರ್ಣಯವನ್ನು ಕೈಗೊಂಡಿದ್ದವೆ ಎಂದು ಹೇಳಿ ಮಹಾರಾಷ್ಟ್ರ ಶಾಸನಸಭೆಯಲ್ಲಿ ಬಂದಿದೆ. ನಮ್ಮ ಸರ್ಕಾರದ ನಿಲುವು ಈ ಬಗ್ಗೆ ಅವರು ಉತ್ತರ ಕೊಡುವ ರೀತಿ ಸ್ಪಷ್ಟ ಇರಬೇಕು. ಅವರು ಹೇಳಿದ್ದಕ್ಕೆ ನಾವು ಸೌಮ್ಯವಾಗಿ ಕುಳಿತು ಕೊಂಡರೆ ಅದು ಸರಿಯಾದಂಥ ರೀತಿನೀತಿಯಾಗುವುದಿಲ್ಲ. ಆದ್ದರಿಂದ ಮಾನ್ಯಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ, ಈ ಬಗ್ಗೆ ಸಾರ್ವಜನಿಕವಾದ ಚರ್ಚೆಯೂ ಆಯಿತು. ಒಂದುಕಡೆ ಮಾನ್ಯ ಮುಖ್ಯಮಂತ್ರಿಗಳು, ಅದನ್ನು ನಾನು ಹೇಳಲಿಲ್ಲ ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅವರ ಮಾತಿನ ಬಗ್ಗೆ ನನಗೆ ನಂಬಿಕೆ ಇದೆ.

ಅಧ್ಯಕ್ಷರು : ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ತಾವು ಕೂಡ ಬಹಳ ಹಿರಿಯ ಸದಸ್ಯರು. ಈಗ ವರದಿಗಳನ್ನು ಸಭೆಯ ಮುಂದೆ ಇಟ್ಟುಬಿಡಲಿ. ಆಮೇಲೆ ಇದೊಂದು ನಮ್ಮ ಮುಂದೆ ಇರುವುದರಿಂದ ಅವರು ಸೂಚನೆಯನ್ನು ಮಂಡಿಸಿದಾದಮೇಲೆ ಆ ನಂತರ ಸಮಯ ಇರುತ್ತದೆ. ಈ ವಿಚಾರವನ್ನು ಆ ನಂತರ ಪ್ರಸ್ತಾಪ ಮಾಡಬಹುದು.

ಶ್ರೀ. ವಾಟಾಳ್ ನಾಗರಾಜ್ : ಇದರ ಬಗ್ಗೆ ಅವರು ಉತ್ತರವನ್ನು ಕೊಡಬೇಕು. ಮತ್ತೊಂದು ಬರಗಾಲದ ಬಗ್ಗೆ ನಾನು ತಮಗೊಂದು ಪತ್ರವನ್ನು ಬರೆದಿದ್ದೆ. ಅದಕ್ಕೆ ತಾವು ಏನು ಮಾಡಿದಿರಿ? ನಿಯಮ 69 ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿ ಬರೆದಿದ್ದೀರಿ. ನನಗೆ ಪತ್ರ ಬಂದಿದೆ. ಈಗ ಮೊದಲನೇ ಆದ್ಯತೆ ಈ ಸಭೆಯನ್ನು ಕರೆದ ಉದ್ದೇಶವೇನು? ವಿರೋಧ ಪಕ್ಷದ ಮುಖಂಡರುಗಳನ್ನೆಲ್ಲಾ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕೊಠಡಿಯಲ್ಲಿ ಕರೆದು ಮಾತನಾಡಿದರು. ಯಾವುದಕ್ಕೆ? ಬರಗಾಲದ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು ಎಂದು ಹೇಳಿ. ಈ ಸಭೆಯಲ್ಲಿ ಅತೀ ಮುಖ್ಯವಾಗಿ ಬರಗಾಲದ ಬಗ್ಗೆ ಚರ್ಚೆಯಾಗಬೇಕು. ಈ ಬರಗಾಲದ ಬಗ್ಗೆ ಕರೆದಿರುವ ಸಭೆಯನ್ನು ಬೇರೆ ದಿಕ್ಕಿಗೆ ತಾವು ತೆಗೆದುಕೊಂಡು ಹೋಗುತ್ತೀರಿ ಎಂದು ನಾನು ಅಂದುಕೊಂಡಿಲ್ಲ. ನನ್ನ ಮನವಿ ಏನೆಂದರೆ, ಬರಗಾಲದ ಬಗೆಗಿನ ಚರ್ಚೆಗೆ ತಾವು ಪ್ರಾಮುಖ್ಯತೆಯನ್ನು ಬರಗಾಲದ ಬಗ್ಗೆ ಕೊಡಬೇಕು ಎಂದು ನಮ್ಮ ಮನವಿ. ಅದಕ್ಕೆ ತಾವು ಸ್ಪಂದಿಸುತ್ತೀರಿ ಎಂದು ಹೇಳಿ ನಾನು ಬಹಳ ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಮಾಡಕೊಂಡಿರುವಂಥ ನಿಯಮಾವಳಿಗಳಪ್ರಕಾರ ಪ್ರಶ್ನೋತ್ತರ ಮುಗಿದ ತಕ್ಷಣ ಇದೇನು ಒಂದು ಸತ್ಯಸಂಪ್ರದಾಯ ಬೆಳೆದುಕೊಂಡು ಬಂದಿದೆ ಎಂದರೆ, ಇವತ್ತು ನಾವು ಯಾವುದೇ ಮಹತ್ವವಾದ ವಿಷಯ ಪ್ರಸ್ತಪ ಮಾಡಹಿಮಾಡುವುದಾದರೂ ಪ್ರಶ್ನೋತ್ತರ ಆದಮೇಲೂ ತೆಗೆದುಕೊಳ್ಳಿ ಎಂದು ಒಂದು ನಿಯಮಾವಳಿಗಳನ್ನು ನಾವೇ ಮಾಡಿಕೊಂಡಾಗ ಅದಕ್ಕೆ ನಾನು ಅಡ್ಡಿಬರಬಾರದು ಒಂದು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ನಿಂತುಕೊಂಡು ಎಂದು ಅದಕ್ಕೆ ನಾನು ಪ್ರಸ್ತಾಪ ಮಾಡಿಲಿಲ್ಲ.

ನಾನೇನು ಇವತ್ತು ಈ ರಾಜ್ಯದ ಸರ್ಕಾರದ ಬಗ್ಗೆ ಒಂದು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಬೇಕು ಎಂದು...

ಅಧ್ಯಕ್ಷ : ನಾನು ಮುಂದಿನ ಕಲಾಪಗಳಿಗೆ ಹೋಗುತ್ತಿಲ್ಲ. ಅದಕ್ಕೇ ನಾನು ತಮ್ಮಲ್ಲಿ ಮೆಲು ದನಿಯಲ್ಲಿ ಕೇಳಿದೆ, ವರದಿಗಳು ಯಾವುವು ಇವೆ ಅವುಗಳನ್ನು ಮಂಡಿಸಿ ಬಿಡಲಿ...

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಪರ್ಮಿಟ್‌ಮಾಡುವುದಾದರೆ ಅದು ಆಗಬಹುದು. ಇಲ್ಲಿ ನಿಯಮ ಏನು ಇದೆ ಎಂದರೆ ಅದನ್ನು ಮಂಡನೆ ಮಾಡಲು ಬರುವುದಿಲ್ಲ.

ಅಧ್ಯಕ್ಷರು : ಆಯಿತ, ಪೇಪರ್‌ಮಂಡಿಸುವುದು ಆಮೇಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೂಲ್ಸ್ ಪ್ರಕಾರ ಕೊಡಿ...

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಸಭೆಯ ನಿಯಮಾವಳಿ ಪ್ರಕಾರ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳತಕ್ಕ ಕಾಲದಲ್ಲಿ ಪ್ರಸ್ತಾಪ ಅಥವಾ ಚರ್ಚೆಯ ಎರಡು ಹಂತದಲ್ಲಿ ಇರತಕ್ಕ ವಿಷಯದ ಮಧ್ಯೆ ನಾವಿದ್ದೇವೆ. ಇಲ್ಲಿ ನನಗೆ ಗೊತ್ತಿರುವ ಹಾಗೆ ಅವಿಶ್ವಾಸ ನಿರ್ಣಯದ ಬಗ್ಗೆ ಸಬ್ಜೆಕ್ಟ್ ಟು ಕರೆಕ್ಷನ್. ಮತ್ತೇನಾದೂ ವ್ಯತ್ಯಾಸ ಇದ್ದರೆ I stand dorrected,...ಅದರರ ಬಗ್ಗೆ ಏನೂ ಇಲ್ಲ, ತಮ್ಮ ಅನುಮತಿಯನ್ನು ಪಡೆದು ವಿಷಯ ಪ್ರಸ್ತಾಪ ಮಾಡುವುದಕ್ಕೆ ಯಾವುದೇ ಪ್ರತಿಬಂಧಕ ನನಗೆ ಕಾಣಿಸುತ್ತಲ್ಲ. If a discussion is to be allowed and taken up, ಹಾಗೇನಾದರೂ ತಾವು ಪಕ್ಕದಲ್ಲಿ ಕನ್ನಡದಲ್ಲಿಯೇ ಹೇಬೇಕು ಎಂದು ಹೇಳುತ್ತಿದ್ದಾರೆ ಅದಕ್ಕಾಗಿ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂದಾಗ ಆಗ ಆದ್ಯತೆಯನ್ನು ಅವಿಶ್ವಾಸ ನಿರ್ಣಯ ಪಡೆಯುತ್ತದೆ ಎನ್ನ ತಕ್ಕದ್ದು ನನಗೆ ಗೊತ್ತಿರುವ ಹಾಗೆ ವಿಷಯ ಪ್ರಸ್ತಾಪ ಮಾಡುವುದಕ್ಕೂ ಕೂಡ ತಾವು ಸೆಕ್ರೆಟರೀಸ್

ರೀಪೋರ್ಟ್ ಇಡುವುದು ಮತ್ತೊಂದು ಇಡುವುದು, ಇದಕ್ಕೆ ನನಗೇನೂ ಪ್ರತಿಬಂಧಕ ಕಾಣುತ್ತಿಲ್ಲ. That is part and parcel of the regular business. ಅದಕ್ಕೇನೂ ತೊಂದರೆ ಬರುವುದಿಲ್ಲ. ಹಾಗಾದರೆ ಮುಂದಿನದೆಲ್ಲಾ ಹೊರಟು ಹೋಗಿಬಿಟ್ಟರೆ ಇದಕ್ಕೇನೂ ಆದ್ಯತೆ ಬರುವುದಿಲ್ಲ, ಗೌರವ ಬರುವುದಿಲ್ಲ. ಹಾಗಾದರೆ these are all the committees crested by this August House ಕಮಿಟಿ ರಿಪೋರ್ಟ್ ಇಡುವುದಕ್ಕೂ ಕೂಡ ಅಲ್ಲಿ ಪ್ರತಿಬಂಧಕ ಅವಿಶ್ವಾಸ ನಿರ್ಣಯಕ್ಕೆ ಇದೆ ಎಂದು ನಾನು ತಿಳಿದುಕೊಂಡಿಲ್ಲ. ನನಗೆ ಗೊತ್ತಿರುವ ಹಾಗೆ ಕೇಳಿಕೊಳ್ಳುತ್ತಿದ್ದೇನೆ.

ಅದು ನೋಡಿ, ಹಾಗೇನಾದರೂ ಇದ್ದರೆ..

ಅಧ್ಯಕ್ಷರು : ಅದಕ್ಕೆ ನಾನು ಅವರನ್ನು ಕೇಳಿದೆ. you are right. ನೀವು ಹೇಳಿದ್ದುದು ಸರಿ. ನಾನು ಒಪ್ಪುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ರಿಪೋರ್ಟ್ ಇಟ್ಟುಕೊಂಡು ನಾವು ಮುಂದೆ ಹೋಗಬಹುದಲ್ಲ.

ಶ್ರೀ ಬಿ. ಎಸ್. ಯಡಿಯಬರಪ್ಪ : ಮಾನ್ಯ ಮಾಜಿ ಮಂತ್ರಿಗಳಾಗಿರುವಂತಹ ಬಂಗಾರಪ್ಪನವರಿಗೆ;

ಅಧ್ಯಕ್ಷರು : ಮಾಜೀ ಮುಖ್ಯಮಂತ್ರಿಗಳಾಗಿದ್ದವರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಾಜೀ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ಬಂಗಾರಪ್ಪನವರಿಗೆ ನಿಯಮೂವಳಿಗಳು ಗೊತ್ತಿದೆ. ಅವರೇನೂ ಹೊಸಬರಲ್ಲ. ನನ್ನ ಅಭಿಪ್ರಾಯ ಏನೆಂದರೆ, ಯಾವುದಾದರೂ ಒಂದು ಸಂದರ್ಭದಲ್ಲ, ಅತ್ಯಂತ ಪ್ರಮುಖವಾಗಿರುವಂತಹ ವಿಷಯ...

ಅಧ್ಯಕ್ಷರು : ಅದಕ್ಕಾಗಿಯೇ ಚರ್ಚೆ ಬೇಡ, ನಾನು ಒಪ್ಪಿಕೊಂಡಿದ್ದೇನೆ. ನೀವು ಪ್ರಸ್ತಾಪವನ್ನು ಮಂಡಿಸಬಹುದು.

ಪ್ರಸ್ತಾವ ಮಂಡನೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ನಾನು ಈ ಕೆಳಕಂಡ ಪ್ರಸ್ತಪವನ್ನು ಮಂಡಿಸುತ್ತೇನೆ.

"ಈ ಸದನ ಶ್ರೀ ಎಚ್. ಡಿ. ದೇವೇಗೌಡ ಅವರ ನೇತೃತ್ವ ಮಂತ್ರಿ ಮಂಡಲದಲ್ಲಿ ಅವಿಶ್ವಾಸನ್ನು ವ್ಯಕ್ತಪಡಿಸುತ್ತದೆ "

ಈ ಪ್ರಸ್ತಾಪವನ್ನು ನಾನು ತಮ್ಮ ಮುಂದೆ ಕಳಿಸಿಕೊಟ್ಟಿದ್ದೇನೆ. ಅದನ್ನು ತಾವು ತೆಗೆದುಕೊಳ್ಳಬೇಕೆಂದು ಈ ಸಂರ್ಭದಲ್ಲಿ ಹೇಳಿ,

ಅನುಮೋದನೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ

ಮಾಡಿಕೊಡಬೇಕು. 167ನೇ ರೂಲ್ಸಿ ಪ್ರಕಾರ ತಾವು ಅವಕಾಶ ಮಾಡಿಕೊಡಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಮಂಡಿಸಿದ್ದಾಯಿತು.

ಶ್ರೀ ವೈ. ರಾಮಕೃಷ್ಣ : ನಾನು ಅನುಮೋದಿಸುತ್ತದೆ.

(ಗೊಂದಲ)

ಅಧ್ಯಕ್ಷರು : ನಿಯಮಾವಳಿಗಳ ಪ್ರಕಾರ ಅಗತ್ಯ ಸಂಖ್ಯೆಯ ಸದಸ್ಯರು ಈ ನಿರ್ಣಯಕ್ಕೆ ಸಮ್ಮತಿಸಿರುವುದರಿಂದ ಮುಂದಿನ ಹಂತಕ್ಕೆ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಇದರ ಮೇಲೆ ತಾವು ಹೇಳುತ್ತೀರೇ.

ಶ್ರೀ ಎಚ್.ಡಿ. ದೇವೇಗೌಡ : ಇದರ ಬಗ್ಗೆ ಪ್ರಸ್ತಾಪ ಮಾಡೋಣ. ಮಾನ್ಯ ಅಧ್ಯಕ್ಷರೇ ಅನುಮತಿ ಪಡೆದು ಹೇಳುತ್ತೇನೆ. ನನಗೆ ಗೊತ್ತಿರುರ ಪ್ರಕಾರ ಎರಡು ವಿಧಾನ ಇವೆ. ಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಆಗಿ ಅದಕ್ಕೆಕ ನಿಯಮದ ಪ್ರಕಾರ ಎಷ್ಟು ಜನರ ಬೆಂಬಲ ಬೇಕೋ ಅಷ್ಟು ಬೆಂಬಲ ಸಿಕ್ಕಿದ ಮೇಲೆ ತಾವು ಸಬೆಯಲ್ಲಿ ಅನುಮತಿ ಕೊಡಬೇಕು, ಅದು ಮೊದಲನೆಯದು. ಅನುಮತಿ ಕೊಟ್ಟ ಮೇಲೆ ಎಷ್ಟು ದಿನ ಚರ್ಚೆ ಆಗಬೇಕು? ಯಾವಾಗ ಚರ್ಚೆ ಆಗಬೇಕು? ನಿರ್ಣಯ ಮಾಡತಕ್ಕದ್ದು. ಒಂದು ತಾವು ಎಲ್ಲರನ್ನೂ ತಮ್ಮ ಕೊಠಡಿಗೆ ಕರೆಯಿಸಿ ನಿರ್ಣಯ ಮಾಡುವುದು ಒಂದು ಭಾಗ, ಇನ್ನೊಂದು ಸಭೆಯಲ್ಲಿಯೇ ನಿರ್ಣಯ ತೆಗೆದುಕೊಳ್ಳತಕ್ಕದ್ದು ಭಾಗ. ನನಗೂ ಗೊತ್ತಿರುವಂತೆ ಅನೇಕ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ ಮೇಲೆ ಅದು ತೀರ್ಮಾನ ಆಗುವವರೆಗೆ ಸಭೆಯಲ್ಲಿ ನಾವು ಬೇರೆ ಕಾರ್ಯಕ್ರಮವನ್ನು ಮುಂದುವರಿಸತಕ್ಕದ್ದು ನೈತಿಕ ಹಕ್ಕು ನಮಗೆ ಇರುವುದಿಲ್ಲ. ಆದ್ದರಿಂದ ಈ ಚರ್ಚೆ ಈಗಲೇ ಪ್ರಾರಂಭವಾಗಲಿಕ್ಕೆ ತಾವು ಅನುಮತಿ ಕೊಡಬೇಕು, ಸಭೆ ಅನುಮತಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.